ಇ) ಮತ್ತು ಈ) ಅಲ್ಪ ಸಂಖ್ಯಾತರ ಹಿತರಕ್ಷಣೆಯನ್ನು ಕಾಪಾಡಲು ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಸಮೀಕ್ಷೆ, ಅವಶ್ಯಕತೆಗಳ ಪೂರೈಕೆ ಹಾಗೂ ಸೇವೆಯಲ್ಲಿರುವ ಶಿಕ್ಷಕರಿಗೆ ತರಬೇತಿ, ಮತ್ತು ಉತ್ತಮ ಮಟ್ಟದ ಪಠ್ಯಪುಸ್ತಕಗಳ ಸಕಾಲಿಕ ಸರಬರಾಜು.

ಸರಕಾರಿ ಶಾಲಾ ಅಧ್ಯಾಪಕರಿಗೆ ಸಿಗುವ ಸೌಲಭ್ಯಗಳನ್ನು ಖಾಸಗಿ ಶಾಲಾ ಅಧ್ಯಾಪಕರಿಗೂ ವಿಸ್ತರಿಸುವ ಬಗ್ಗೆ

೧೧೫೫. ಶ್ರೀ ಬಿ. ಎಸ್. ಆಚಾರ್ (ಬೈಂದೂರು).— ಮಾನ್ಯ ವಿದ್ಯಾ ಮಂತ್ರಿಗಳುವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರೀ ಖಾಸಗೀ ಶಾಲೆಗಳಲ್ಲಿ ದುಡಿಯುತ್ತಿದ್ದು ಎಸ್‌ಎಸ್‌ಎಲ್‌ಸಿ ಶ್ರೇಣಿಯ ಅಧ್ಯಾಪಕರಿಗ ಮತ್ತು ದ್ವಿತೀಯ ದರ್ಜೆ ಗುಮಾಸ್ತರಿಗೆ ಪದವಿ ಪಡೆದಲ್ಲಿ ಎರಡು ವರ್ಷಗಡ ಬಡ್ತಿ ನೀಡಬೇಕೆಂದು ಸರಕಾರಿ ಆಜ್ಞೆ (ಇಡಿ ೧೫೮ ಎಸ್‌ಎಲ್‌ಬಿ ೭೫, ದಿನಾಂಕ ೧೩–೧೨–೭೬) ಇರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ೧೯೭೬ರ ವೇತನ ಪರಿಷ್ಕರಣದ ಬಳಿಕ ಸರ್ಕಾರಿ ಆಜ್ಞೆ ಎಫ್‌ಡಿ ೧೪ ಎಸ್‌ಆರ್‌ಪಿ (೧) ೭೭ ದಿನಾಂಕ ೪–೫–೭೭ರಂತೆ ಈ ಮುಂಬಡ್ತಿಯಲ್ಲಿ ಖಾಸಗಿ ಶಾಲಾ ನೌಕರರಿಗೆ ಯಾಕೆ ನೀಡಲಾಗುತ್ತಿಲ್ಲ ?

ಇ) ಇದರ ನಿವಾರಣೆಗೆ ಯಾವ ಕ್ರಮ ಕೈಗೊಳ್ಳಲಾಗಿದೆಯು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ನಿಜವಲ್ಲ. ಆದರೆ ಆದೇಶ ಸಂಖ್ಯೆ ಇಡಿ ೧೫೮ ಎಸ್‌ಎಲ್‌ಬಿ ೭೫ ದಿನಾಂಕ ೧೪–೧೨–೭೬ರ ಪ್ರಕಾರ ನಾಲ್ಕು ವಾರ್ಷಿಕ ವೇತನ ಮುಂಬಡ್ತಿ ಅವಕಾಶವಿದೆ.

ಆ) ಈ ಸರ್ಕಾರಿ ಆದೇಶವನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ವಿಸ್ತರಿಸಿಲ್ಲ. ದಿನಾಂಕ ೧–೧೧–೭೯ರಿಂದ ಈ ಸೌಲಭ್ಯವನ್ನು ರದ್ದುಮಾಡಲಾಗಿದೆ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲಾ ಧರ್ಮವೀರ ಫಾರಂನ ಅಭಿವೃದ್ಧಿ ಮತ್ತು ಉತ್ಪತ್ತಿ ಬಗ್ಗೆ

೮೨೦. ಶ್ರೀ ಬಿ. ಗಂಗಣ್ಣ, (ಕಳ್ಳಂಬೆಳ್ಳ).— ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯಲ್ಲಿರುವ ಧರ್ಮವೀರ ತೋಟಗಾರಿಕಾ ಫಾರ್ಮ್‌ನಲ್ಲಿ ಒಟ್ಟು ಫಲ ಕೊಡುವ ಮರಗಳು ಮತ್ತು ಸಸ್ಯಗಳು ಎಷ್ಟು ?

ಆ) ಪ್ರತಿ ವರ್ಷ ಹೆಚ್ಚುತ್ತಿರುವ ಈ ಮರಗಳ ಸಂಖ್ಯೆ ಎಷ್ಟು ?

ಇ) ಕಳೆದ ಮೂರು ವರ್ಷಗಳಿಂದ ಪ್ರತಿ ಸಾಲಿನಲ್ಲಿ ಸದರಿ ಮರಗಳಿಂದ ದೊರಕುತ್ತಿರುವ ತೆಂಗಿನ ಕಾಯಿಗಳು ಎಷ್ಟು ?

ಈ) ಈ ತೆಂಗಿನ ಕಾಯಿಗಳನ್ನು ವಿಲೇವಾರಿ ಮಾಡಿರುವ ವಿಧಾನ ಯಾವುದು ಮತ್ತು ಮಾರಾಟದಿಂದ ಪ್ರತಿ ವರ್ಷ ದೊರಕುವ ಮೊತ್ತ ಎಷ್ಟು ?

ಉ) ಸದರಿ ಫಾರ್ಮ್‌ನ ಉತ್ಪನ್ನಗಳನ್ನು ನಿಯಮದ ಪದ್ಧತಿಯಂತೆ ಹರಾಜು ಮಾಡದಿರಲು ಕಾರಣವೇನು ?

ಊ) ಈ ಪದ್ಧತಿಯನ್ನು ಜಾರಿಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಈ ಕ್ಷೇತ್ರದಲ್ಲಿ ಒಟ್ಟು ಇರುವ ಗಿಡಗಳ ಸಂಖ್ಯೆ. ೧೨, ೭೪೬ ಅವುಗಳಲ್ಲಿ ಹೊಂಬಾಳೆ ಬಂದಿರುವ ಗಿಡಗಳು ೪,೮೮೨.

ಆ) ಅನುಬಂಧ-೧ರಲ್ಲಿ ವಿವರ ನೀಡಿದೆ.

ಇ) ೧೯೮೩-೮೪ನೇ ಸಾಲಿನಲ್ಲಿ ೩,೯೭೬, ೧೯೮೪-೮೫ರಲ್ಲಿ ೫,೨೮೧, ೧೯೮೫-೮೬ರಲ್ಲಿ, ೫,೩೩೩ ೧೯೮೬-೮೭ರಲ್ಲಿ ಫೆಬ್ರುವರಿ ಅಂತ್ಯದವರೆಗೆ ೧೫,೬೬೦.

ಈ) ಹೆಚ್ಚಿನ ಪಂಟ್ಪದಲ್ಲಿ ಕೊಯಿಲು ಮಾಡಿದಾಗ ತೆಂಗಿನ ಕಾಯಿಗಳನ್ನು ಶಿರಾ ಕೃಷಿ ಉತ್ಪನ್ನ ಮಾರಾಟ ಕೇಂದ್ರದ ಮೂಲಕ ಹಾಗೂ ಸಣ್ಣ ಪ್ರಮಾಣದಲ್ಲಿ ಕಟಾವು ಮಾಡಿದಾಗ ಕ್ಷೇತ್ರದಲ್ಲಿಯೇ ಮಾರಾಟಪನ್ನು ಸಹ ಮಾಡಲಾಗುತ್ತಿದೆ. ತೆಂಗಿನ ಮಾರಾಟದಿಂದ ಪ್ರತಿ ವರ್ಷ ದೊರೆತ ಬೆಲೆ ಈ ಕೆಳಕಂಡಂತಿದೆ.—

೧೯೭೯-೮೦	೧೯೮೦-೮೧	೧೯೮೧-೮೨	೧೯೮೨-೮೩	೧೯೮೩-೮೪
ರೂ. ೪೩.೨೦	೩೫೯-೬೦	೧,೯೫೫.೬೦	೩.೩೧೮.೦೫	೪,೬೪೦.೧೬
೧೯೮೪-೮೫	೧೯೮೫-೮೬	೧೯೮೬-೮೭	ಫೆಬ್ರುವರಿ ಅಂತ್ಯದವರೆಗೆ	
ರೂ. ೬೪೧.೦೦	೪,೪೯೮.೩೩	೧೩,೭೬೬.೦೬		

ಉ) ನೀರಿನ ತೊಂದರೆಯಿಂದ ಇಲ್ಲಿ ಈ ಮರಗಳಿಂದ ಬರತಕ್ಕಂತಹ ಕಾಯಿಗಳ ಗಾತ್ರ ಬಹಳ ಚಿಕ್ಕದಿದ್ದು, ಇದನ್ನು ಕೃಷಿ ಉತ್ಪನ್ನ ಮಾರಾಟ ಕೇಂದ್ರಕ್ಕೆ ತೆಗೆದುಕೊಂಡು ಹೋದಾಗ ವಿಲೇವಾರಿ ಆಗುವುದು ಕಷ್ಟಕರವಾಗುತ್ತದೆ. ಅದೂ ಅಲ್ಲದೆ ಹೆಚ್ಚಿನ ಬೆಲೆಯೂ ಸಹ ಸಿಗುವುದಿಲ್ಲ. ಮತ್ತು ಸಣ್ಣ ಪ್ರಮಾಣದಲ್ಲಿ ಕಟಾವು ಮಾಡಿದಂತಹ ಕಾಯಿಗಳನ್ನು ಕೃಷಿ ಮಾರಾಟ ಕೇಂದ್ರಕ್ಕೆ ಒಯ್ದು ಮಾರಾಟ ಮಾಡುವುದು ಸಹ ತೊಂದರೆಯಾದ್ದರಿಂದ ಸಣ್ಣ ಪ್ರಮಾಣದಲ್ಲಿ ಕಟಾವು ಮಾಡಿದಾಗ ಅದರಲ್ಲಿಯೂ ಸಣ್ಣ ಕಾಯಿಗಳು ಜಾಸ್ತಿ ಇದ್ದಾಗ ಇಲಾಖಾ ವತಿಯಿಂದ ಕ್ಷೇತ್ರದಲ್ಲಿಯೇ ಮಾರಲಾಗುತ್ತಿದೆ. ಸ್ವಲ್ಪ ಉತ್ತಮ ಗಾತ್ರದ ಕಾಯಿಗಳು ಹೆಚ್ಚಿನ ಪ್ರಮಾಣದಲ್ಲಿ ದೊರೆತಾಗ ಕೃಷಿ ಉತ್ಪನ್ನ ಮಾರಾಟ ಕೇಂದ್ರಕ್ಕೆ ಒಯ್ದು ಮಾರಾಟ ಮಾಡಲಾಗುತ್ತಿದೆ. ಸದರೀ ತೋಟಗಾರಿಕಾ ಕ್ಷೇತ್ರವು ಸಂಕೀರ್ಣ ತಳಿಯ ಕ್ಷೇತ್ರ ವಾದ್ದರಿಂದ ಫಸಲನ್ನು ಹರಾಜು ಮಾಡಲು ಸಾಧ್ಯವಿಲ್ಲ. ಏಕೆಂದರೆ ಸಂಕೀರ್ಣ ತಳಿಯ ಕಾಯಿಗಳನ್ನು ಪಡೆಯಲು ಕೃತಕ ಪರಾಗ ಸ್ಪರ್ಶ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಹರಾಜು ಮಾರಾಟ ಮಾಡಿದಲ್ಲಿ ಹರಾಜು ಬಿಡ್ದುದಾರನು ತೊಂದರೆ ಕೊಡುವ ಸಂದರ್ಭ ಉಂಟು.

ಊ) ''ಉ'' ಖಂಡದಲ್ಲಿ ಉತ್ತರಿಸಿದಂತೆ, ಈ ಕ್ಷೇತ್ರ ಸಂಕೀರ್ಣ ತಳಿಯ ಕ್ಷೇತ್ರವಾದ್ದರಿಂದ ಹರಾಜಿನಲ್ಲಿ ಫಸಲನ್ನು ವಿಲೇವಾರಿ ಮಾಡುವುದು ಸಾಧ್ಯವಿಲ್ಲ. ನೀರಿನ ಅನುಕೂಲತೆ ಹೆಚ್ಚಿದಂತೆ ಹೆಚ್ಚಿನ ಗಿಡಗಳನ್ನು ಸಂಕೀರ್ಣ ಕಾಯಿಗಳನ್ನು ಉತ್ಪಾದಿಸಲು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸಂಕೀರ್ಣ ತಳಿಗೆ ಉಪಯೋಗಿಸಿಕೊಳ್ಳದೆ ಇರತಕ್ಕಂತಹ ಮರಗಳಿಂದ ಬಂದಂತಹ ಫಸಲನ್ನು ಶಿರಾ ಕೃಷಿ ಮಾರುಕಟ್ಟೆಯಲ್ಲಿ ನಿಯಮದ ಪ್ರಕಾರ ಹರಾಜು ಮಾಡಲಾಗುತ್ತಿದೆ.

ಅನುಬಂಧ–೧

(ಖಂಡ (ಆ) ಕ್ಕೆ ಸಂಬಂದಿಸಿದಂತೆ)

ಶ್ರೀ ಧರ್ಮವೀರ ತೋಟಗಾರಿಕೆ ಕ್ಷೇತ್ರದಲ್ಲಿ ವರ್ಷವಾರು ಸಸಿಗಳನ್ನು ನಾಟಿ ಮಾಡಿರುವ ವಿವರ -- ''ಆ'' ಕ್ಕೆ ಉತ್ತರ

ವರ್ಷಗಳು	ನಾಟಿ ಮಾಡಿದ ಗಿಡಗಳ ಸಂಖ್ಯೆ			ಹಾಲಿ ಇರುವ ಗಿಡಗಳ ಸಂಖ್ಯೆ		
	ಉದ್ದನೆ ಜಾತಿ	ಗಿಡ್ಡ ಜಾತಿ	ಒಟ್ಟು	ಉದ್ದನೆ ಜಾತಿ	ಗಿಡ್ಡ ಜಾತಿ	ಒಟ್ಟು
೧೯೭೧–೭೨	೧,೭೨೮	೫೭೬	೨,೩೦೪	೧,೭೨೮	೫೭೬	೨,೩೦೪
೧೯೭೨–೭೩	೬,೫೯೭	೧,೯೬೪	೮,೫೬೧	೧,೮೨೫	೨,೫೪೦	೪,೫೬೫
೧೯೭೩–೭೪	೧,೧೬೯	೫೨೬	೧,೬೯೫	೯,೨೯೩	೩,೧೪೬	೧೨,೪೫೯
೧೯೭೪–೭೫	—	೧,೩೩೪	೧,೩೩೪	೯,೦೮೮	೪,೪೭೦	೧೩,೫೫೮
೧೯೭೫–೭೬	೧,೮೨೭	೧,೫೫೩	೩,೩೮೦	೧೧,೧೩೦	೬,೦೨೩	೧೭,೧೫೩
೧೯೭೬–೭೭	—	—	—	೧೦.೭೫೦	೫,೬೪೫	೧೬,೧೧೬
				೧೦,೬೭೩	೫,೪೪೩	೧೬,೩೯೫
೧೯೭೭–೭೮	—	—	—	೧೦,೮೭೯	೫,೬೦೮	೧೬,೪೮೭
೧೯೭೯–೮೦	—	—	—	೧೦.೧೦೪	೪,೦೨೪	೧೪,೧೨೮
೧೯೮೦–೮೧	೪೧೦	—	೪೧೦	೧೦.೫೧೪	೪,೦೦೧	೧೪,೫೧೮
೧೯೮೧–೮೨	೫೧೬	೪೮೩	೯೯೯	೧೧,೦೩೦	೪,೪೮೭	೧೬,೫೧೭
೧೯೮೨–೮೩	—	—	—	೧೦,೬೨೧	೩,೪೫೭	೧೪,೦೭೮
೧೯೮೩–೮೪	—	—	—	೯,೧೬೦	೩,೦೩೮	೧೨,೨೯೮
೧೯೮೪–೮೫	—	೨೯೭	೨೯೭	೮,೪೦೨	೩,೪೩೫	೧೧,೮೩೭
೧೯೮೫–೮೬				೮,೩೨೬	೩,೯೧೯	೧೨,೨೪೫
೧೯೮೬–೮೭	—	೮೧೩	೫೧೩	೮,೩೧೪	೪,೪೩೨	೧೨,೭೪೬